

**ಗವಿಸಿದ್ಧ ಹೊಸಮನಿ**
ಕಲೆ: ವಿಶ್ವನಾಥ್ ಎ.ಎಸ್.

# ಬಾವಿ ಸಂಗಮ್ಮಳೂ ಕಂಪ್ರುನಿ ಕಥೆಯೂ



ಎದಿಗುದ್ದೋಕ ಹಂಗ ಪುಸುಪುಸು ಬೆಳುದಿದ್ದ ಆ ಊರು ದುರುಗನು ತಾನು ಉಸ್ನೋ ಅಂತ ಉಸುರಾಕಲು ಸವುಡು ಮಾಡಿಕೊಟ್ಟ ಆ ಊರನ್ನ ತನ್ನ ಹಡುದ ಹೆತ್ತವ್ವ ಅಂತಲೇ ಪರಿಭಾವುಸಿಕೊಂಡಿದ್ದನು. ಚಿಗುರ ಮೀಸಿ ಬರೋ ವಯಸ್ಸು ಅವನದು, ಹಂಗಾಗಿ ಮನುಸಿಗ ಬಂದ ಯಾವುದನ್ನೂ ಮಾಡುದೇ ಬಿಡುತ್ತಿರಲಿಲ್ಲ. ಪಕ್ಕುದ ಮನೆಯ ಗುಣವಂತಪ್ಪನ ಮಗ ಲಗುಮ ಊರ ಬಗುಲಾಗಿನ ಪಟ್ಟಣುದಾಗ ಓದೋದನ್ನು ಕಂಡಾಗಿಂದ ತಾನು ಲಾಯರ್‌ಕಿ ಮಾಡ್ತಿನಂತ ಹಟರಕಿ, ಬೆರುಗಿಗೆ ಮಿಡಿಯುತಲಿದ್ದನು. ಆಗೊಮ್ಮೆ, ಈಗೊಮ್ಮೆ ಊರು ಹಿರೇ ದೊಡ್ಡಪ್ಪನ ಮನೆಗೆ ಬರುತ್ತಿದ್ದ ಆ ಪತ್ರಿಕೆಯೊಂದಕ್ಕೆ ಬರೆಯುತ್ತಿದ್ದನು ದುರುಗ. ಅದನ್ನು ತನ್ನ ಚೆಸುಮಾ ಕಣ್ಣಿನಿಂದ ಓದಿರುತ್ತಿದ್ದ ದೊಡ್ಡಪ್ಪನು 'ಏನಾ ಬರದಿಯಲ್ಲಲೇ ಮುದ್ಕಾ' ಅನುತ್ತಲೇ ದುರುಗನು 'ಏನು ಇಲ್ಲಾ ಬುಡ್ರಿ' ಅಂತಾ ಪೇಪುರನ್ನು ಅಲ್ಲಿಂದ ಹಂಗ ಹಗುರಕ ಎಳುಕೊಂಡ ಓದಿ ಖುಸಿಪಡುತ್ತಿದ್ದನು. ಇಂತಪ್ಪ